# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1155 |
| ಸದಸ್ಯರ ಹೆಸರು | : | ಶ್ರೀ ಬಿ.ಜಿ ಪಾಟೀಲ್<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 18-03-2025 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯ ಚಿತ್ತಾಪುರದ ವಾಡಿ ಪುರಸಭೆಯಲ್ಲಿ ಕಸದ ಬುಟ್ಟಿಗಾಗಿ 2020-21ನೇ ಸಾಲಿನಲ್ಲಿ 15ನೇ ಹಣಕಾಸು ಯೋಜನೆಯಡಿ ಎಷ್ಟು ಅನುದಾನವನ್ನು ಮೀಸಲಿಡಲಾಗಿತ್ತು; ಹಾಗೂ ಎಷ್ಟು ಕಸದ ಬುಟ್ಟಿಗಳನ್ನು ಖರೀದಿ ಮಾಡಲಾಗಿದೆ; | 15ನೇ ಹಣಕಾಸು ಯೋಜನೆಯಡಿ ಕಲಬುರಗಿ ಜಿಲ್ಲೆಯ ಚಿತ್ತಾಪುರದ ವಾಡಿ ಪುರಸಭೆಯಲ್ಲಿ ಕಸದ ಬುಟ್ಟಿಗಾಗಿ 2020-21ನೇ ಸಾಲಿನ ಉಳಿತಾಯದ ಮೊತ್ತದಲ್ಲಿ ರೂ.12.07ಲಕ್ಷಗಳು ಮತ್ತು ಮೂಲ ಕ್ರಿಯಾ ಯೋಜನೆಯಲ್ಲಿ ರೂ.12.00ಲಕ್ಷಗಳು ಸೇರಿಸಿ ಒಟ್ಟು ರೂ.24.07 ಲಕ್ಷಗಳ ಅನುದಾನವನ್ನು ಮೀಸಲಿಡಲಾಗಿತ್ತು ಹಾಗೂ 11042 ಕಸದ ಬುಟ್ಟಿಗಳನ್ನು ಖರೀದಿ ಮಾಡಲಾಗಿದೆ. |
| ಆ) | ಕಸದ ಬುಟ್ಟಿ ಖರೀದಿಯಲ್ಲಿ ಅವ್ಯವಹಾರ ನಡೆದಿರುವುದು ಹಾಗೂ ಕಸದ ಬುಟ್ಟಿ ವಿತರಣೆಯಲ್ಲಿ ತಾರತಮ್ಯ ಮಾಡುತ್ತಿರುವುದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಕಸದ ಬುಟ್ಟಿ ಖರೀದಿಯಲ್ಲಿ ಯಾವುದೇ ಅವ್ಯವಹಾರ ಮತ್ತು ತಾರತಮ್ಯ ನಡೆದಿರುವುದಿಲ್ಲ. |
| ಇ) | 2020-21ನೇ ಸಾಲಿನಲ್ಲಿ ಮಂಜೂರಾದ ಕಸದ ಬುಟ್ಟಿಗಳನ್ನು 1,2,4,9,10,21,22,23ನೇ ವಾರ್ಡ್‌ಗಳಲ್ಲಿ ಇನ್ನೂ ಹಂಚಿಕೆ ಮಾಡದಿರಲು ಕಾರಣವೇನು; | ಕಲಬುರಗಿ ಜಿಲ್ಲೆಯ ವಾಡಿ ಪುರಸಭೆಯಲ್ಲಿ ಒಟ್ಟು 11042 ಕಸದ ಬುಟ್ಟಿಗಳನ್ನು ಒಂದು ಮನೆಗೆ 2 ಬುಟ್ಟಿಯಂತೆ 15 ವಾರ್ಡ್‌ಗಳ 5521 ಮನೆಗಳಿಗೆ ಈಗಾಗಲೇ ವಿತರಿಸಲಾಗಿರುತ್ತದೆ (ವಾರ್ಡ್ ನಂ.11, 12, 13, 14, 15, 16, 17, 18, 19, 20, 03, 05, 06, 07, 08 ವಾರ್ಡ್‌ಗಳಲ್ಲಿ ಪ್ರತಿ ಮನೆಗೆ 02 ಕಸದ ಬುಟ್ಟಿಗಳನ್ನು ವಿತರಿಸಲಾಗಿದ್ದು, ಒಂದು ಹಸಿಕಸಕ್ಕೆ ಮತ್ತು ಒಣಕಸಕ್ಕೆ ಸಂಗ್ರಹಣೆಗೆ ವಿತರಿಸಲಾಗಿರುತ್ತದೆ).<br><br>ಬಾಕಿ ಉಳಿದ 08 ವಾರ್ಡ್‌ಗಳಾದ ಸಂಖ್ಯೆ. 1, 2, 4, 9, 10, 21, 22, 23 ವಾರ್ಡ್ ಗಳಿಗೆ ಮುಂದಿನ ದಿನಗಳಲ್ಲಿ ಕಸದ ಬುಟ್ಟಿಗಳನ್ನು ಖರೀದಿಸಿ ವಿತರಿಸಲಾಗುವುದು. |
| ಈ) | ಈ ಹಿಂದೆ ಮಂಜೂರಾದ ಕಸದ ಬುಟ್ಟಿಗಳನ್ನು ಈ ಸಾಲಿನ ಟೆಂಡರ್‌ನಲ್ಲಿ ಮಾರ್ಪಡಿಸಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆಸುವ ಉದ್ದೇಶ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? | ಇಲ್ಲ. |

ಸಂಖ್ಯೆ: ನಅಇ 90 ಎಸ್‌ಎಫ್‌ಸಿ 2025

(ರಹೀಂ ಖಾನ್)
ಪೌರಾಡಳಿತ ಹಾಗೂ ಹಜ್ ಸಚಿವರು.